

ಕಲ್ಪಿತದ ಜಡದಲ್ಲಿ
ಚೈತನ್ಯ
ಶಿಲೆ ಕಣವಾಗಿಲ್ಲವೆ
ಕಣದ ಅಣು
ನಕ್ಷತ್ರ

ಖಾದ್ಯಕ್ಕೆ ಒಂದೇ ಪದಾರ್ಥವೇ
ಒಂದರೊಳಗೊಂದು ಮಿಳಿತ
ಪೊರೆಯುತ್ತಿಲ್ಲವೆ ಕಾಯವನು
ಅದನು ಕಾಯುವ ಜೀವವನು
ಒಂದೇ ಅಲ್ಲ
ಎರಡಷ್ಟೇ ಅಲ್ಲ
ಬೆರಳತುದಿಯಲ್ಲೇ ಅಂಟಿಕೊಂಡಿದೆ ಇದು

ಅರಿವಿಗೆ ಬರವೆಲ್ಲಿ
ಅಂಚಿನಲ್ಲೂ ಇಂಚಿನಲ್ಲೂ
ಆದರೆ
ಅರಿವಿಗೆ ಬೆನ್ನಮಾಡಿ
ತನ್ನನು
ತನ್ನನು ಸುತ್ತುವರೆದಿರುವ ಪರವನು
ಇರಿಯುವ ಆತ್ಮಘಾತುಕತೆ

ಇರುವೇ ಅರಿವಾಗದೆ
ಕಳೆದದ್ದರ ಹಿಂದೆ ಸಾಗಿದರೆ
ಈಗ ಇರಲಾಗದು ಸಿಗದು ಹಿಂದಿನದು

ಇರುವ ಕೃತಿಯನೇ ವಿಕೃತಿಗೊಳಿಸುವುದು
ಮಗು ರೂಪಿಸಿದ ಚಿತ್ರಕೆ ಮಸಿ ಎರಚುವುದು

ಇನ್ನೂ ಏನೂ ಆಗಿಲ್ಲ
ಸೃಷ್ಟಿಯಲಿ ಸಾಗಿಬಂದಿರುವುದು ಒಂದು ಬಿಂದು
ಆದರೆ
ಆಗಿರುವ ಧಾರ್ಷ್ಟ್ಯ

ಇರುವಿನ ಸದ್ಯದಲಿ ಇಲ್ಲದೆ
ಆಗಿದ್ದದ್ದ ನೆನೆಯುವುದು
ಇರುವಿಗೆ ಎಸಗುವ ದ್ರೋಹ

ಮಾಡಿಕೊಂಡಿರುವುದು ಇರಬೇಕಾಗಿರಲಿಲ್ಲ
ಆದರೆ ಅದನೇ ಇರುವಂತೆ ಮಾಡಲಾಗುತಿದೆ
ನಡೆಯದೇ ಇದ್ದದ್ದನ್ನು
ನಡೆದಿರುವಂತೆ ನಿಜವಾಗಿ